**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತ ಮೂರನೇಯ ಅಧಿವೇಶನ**

# ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–31)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964ನ್ನು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ 22)ನ್ನು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು, ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು .

**2. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.-** ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22)ರ,-

(i) 105ನೇ ಪ್ರಕರಣದ (3) ನೇ ಉಪಪ್ರಕರಣದ ಕೊನೆಯಲ್ಲಿ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಈ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪಪ್ರಕರಣದಡಿಯಲ್ಲಿ ಸಲ್ಲಿಸಲಾದ ಯಾವುದೇ ವಿವರಪಟ್ಟಿಕೆಗಾಗಿ 2023-24ರ ಆರ್ಥಿಕ ವರ್ಷದ ಪ್ರಾರಂಭದಿಂದ ಹಿಂದಿನ ಆರು ಆರ್ಥಿಕ ವರ್ಷಗಳಿಗಾಗಿ ಈ ಉಪಪ್ರಕರಣದಡಿಯಲ್ಲಿ ಮಾಡಲಾದ ನಿರ್ಧರಣೆಯನ್ನು ಒಂದು ವರ್ಷದೊಳಗಾಗಿ ನಿರ್ಣಯಿಸತಕ್ಕದ್ದು."

(ii) 106ನೇ ಪ್ರಕರಣದಲ್ಲಿ,-

(ಎ) ಉಪಪ್ರಕರಣ (1)ರಲ್ಲಿ "ಖಾಲಿ ಭೂಮಿಗಳು" ಎಂಬ ಪದಗಳ ಬದಲಾಗಿ "ಖಾಲಿ ಕಟ್ಟಡ ನಿವೇಶನಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಉಪಪ್ರಕರಣ (1)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) (i) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕಟ್ಟಡ ನಿರ್ಮಾಣದ ಉದ್ದೇಶಗಳಿಗಾಗಿ ಇರುವ ಕಟ್ಟಡ ನಿವೇಶನಗಳಿಗೆ ಹೊಸ PID (ಸ್ವತ್ತು ಗುರುತಿನ ಸಂಖ್ಯೆ) ಅಥವಾ ಖಾತಾ ನೀಡಲು ಅಧಿಕಾರ ವ್ಯಾಪ್ತಿಯ ಯೋಜನಾ ಪ್ರಾಧಿಕಾರವು ಲೇಔಟ್ ಪ್ಲಾನಿಗಾಗಿ ಪೂರ್ವಾನುಮತಿಯನ್ನು ಆಯುಕ್ತ ಅಥವಾ ಪುರಸಭೆಯ ಮುಖ್ಯಾಧಿಕಾರಿ ಅಥವಾ ಆಯುಕ್ತನಿಂದ ಅಧಿಕೃತಗೊಳಿಸಲಾದ ಯಾರೇ ಅಧಿಕಾರಿ ಅಥವಾ ಮುಖ್ಯಾಧಿಕಾರಿಯಿಂದ ಪಡೆಯತಕ್ಕದ್ದು.

(ii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರಡಿಯಲ್ಲಿ ಅಧಿಸೂಚಿಸಲಾದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಪೌರ ಪ್ರದೇಶಗಳ ಸಂದರ್ಭದಲ್ಲಿ, ಮಂಜೂರಾದ ಲೇಔಟ್ ಪ್ಲಾನನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದಡಿ ಅಧಿಕಾರವ್ಯಾಪ್ತಿಯ ಯೋಜನಾ ಪ್ರಾಧಿಕಾರದಿಂದ ಪಡೆಯತಕ್ಕದ್ದು ಹಾಗೂ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದ ಮತ್ತು 17ನೇ ಪ್ರಕರಣದ ಉಪಪ್ರಕರಣ (2-ಇ) ಉಪಬಂಧಗಳನ್ನು ಅನುಸರಿಸದೆ ಯಾವುದೇ ಹೊಸ ಪಿಐಡಿ ಅಥವಾ ಖಾತಾವನ್ನು ನೀಡತಕ್ಕದ್ದಲ್ಲ.

(iii) ಸ್ಥಳೀಯ ಯೋಜನಾ ಪ್ರದೇಶದ ಅಥವಾ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರಡಿಯಲ್ಲಿ ರಚಿಸಲಾದ ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡದಿರುವ ಪೌರ ಪ್ರದೇಶದ ಸಂದರ್ಭದಲ್ಲಿ, ಮಂಜೂರಾದ ಲೇಔಟ್ ಪ್ಲಾನ್ ಅನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 4-ಕೆ ಪ್ರಕರಣದ (2)ನೇ ಉಪಪ್ರಕರಣದಡಿಯಲ್ಲಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕ ಅಥವಾ ಆತನು ಅಧಿಕೃತಗೊಳಿಸಿದ ಅಧಿಕಾರಿಯಿಂದ ಪಡೆಯತಕ್ಕದ್ದು ಹಾಗೂ ಸಂಬಂಧಪಟ್ಟ ಅಧಿಕಾರಿಯು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳನ್ನು ಅನುಸರಿಸದೆ ಯಾವುದೇ ಹೊಸ ಪಿಐಡಿ ಅಥವಾ ಖಾತಾವನ್ನು ನೀಡತಕ್ಕದ್ದಲ್ಲ:

ಪರಂತು, ಪುರಸಭೆಯ ಯಾರೇ ಅಧಿಕಾರಿಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳನ್ನು ಅನುಸರಿಸಲು ವಿಫಲನಾದರೆ ಮತ್ತು ಕಾನೂನುಬಾಹಿರವಾಗಿ ರಚಿತವಾದ ಪ್ಲಾಟ್‌ಗೆ ಹೊಸ ಪಿಐಡಿ ಅಥವಾ ಖಾತಾವನ್ನು ನೀಡಿದರೆ, ಸಂಬಂಧಪಟ್ಟ ಅಧಿಕಾರಿಯು ನಿಯಮಿಸಬಹುದಾದಂಥ ದಂಡನೆ ಮತ್ತು ಶಿಕ್ಷೆಗೆ ಹೊಣೆಗಾರನಾಗತಕ್ಕದ್ದು.

(1ಬಿ) (i) ಪುರಸಭೆಯು, ಸರ್ಕಾರಿ ಭೂಮಿಯಲ್ಲಿ, ಯಾವುದೇ ಸ್ಥಳೀಯ ಸಂಸ್ಥೆಗೆ, ಯಾವುದೇ ಶಾಸನಬದ್ಧ ಸಂಸ್ಥೆಗೆ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ಸಂಘ ಸಂಸ್ಥೆಗೆ ಸೇರಿದ ಭೂಮಿಯಲ್ಲಿ, ಕಾನೂನು ಬಾಹಿರವಾಗಿ ನಿರ್ಮಿಸಿದ ಕಟ್ಟಡವನ್ನು ಹೊರತುಪಡಿಸಿ, ಕಟ್ಟಡ ಉಪ ವಿಧಿಗಳು ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಿರುವ ಅಥವಾ ಅನಧಿಕೃತ ಲೇಔಟ್‌ನಲ್ಲಿ ಅಥವಾ ರೆವಿನ್ಯೂ ಭೂಮಿಯಲ್ಲಿ ಕಟ್ಟಿರುವ ಕಟ್ಟಡವು ಸೇರಿದಂತೆ ಪ್ರತಿಯೊಂದು ಕಟ್ಟಡಕ್ಕೆ, ಖಾಲಿ ಭೂಮಿಗೆ ಅಥವಾ ಅವೆರಡನ್ನೂ ಒಳಗೊಂಡು ಅಥವಾ ಈ ಉಪಬಂಧದ ಪ್ರಾರಂಭದ ದಿನಾಂಕಕ್ಕೂ ಮೊದಲು ಸೃಜಿಸಿದ ಸ್ವತ್ತಿಗಾಗಿ ಮಾತ್ರ ಅಧಿಭೋಗ ಪ್ರಮಾಣ ಪತ್ರ ಅಥವಾ ಕಟ್ಟಡ ನಿರ್ಮಾಣ ಮುಕ್ತಾಯ ಪ್ರಮಾಣಪತ್ರವನ್ನು ನೀಡದೆಯೇ ವಾಸಕ್ಕೆ ಬಳಸುತ್ತಿರುವ ಕಟ್ಟಡಕ್ಕೆ ಮೊದಲ ವರ್ಷಕ್ಕಾಗಿ ಎರಡು ಪಟ್ಟು ಸ್ವತ್ತು ತೆರಿಗೆಯನ್ನು ವಿಧಿಸಬಹುದು ಮತ್ತು ನಂತರದ ವರ್ಷಗಳಿಗೆ ಸ್ವತ್ತು ತೆರಿಗೆಯನ್ನು ಮಾತ್ರ ವಿಧಿಸತಕ್ಕದ್ದು, ಅದನ್ನು ಒಂದು ಪ್ರತ್ಯೇಕ ರಿಜಿಸ್ಟರಿನಲ್ಲಿ ನಿರ್ವಹಿಸತಕ್ಕದ್ದು. ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2024ರ ಪ್ರಾರಂಭದ ದಿನಾಂಕದ ತರುವಾಯ ಆ ರಿಜಿಸ್ಟರಿನಲ್ಲಿ ಹೊಸ ಸ್ವತ್ತುಗಳನ್ನು ಸೇರಿಸತಕ್ಕದ್ದಲ್ಲ:

ಪರಂತು, ಈ ಉಪ-ಪ್ರಕರಣದ ಮೇರೆಗೆ ಅಂಥ ಕಟ್ಟಡಗಳಿಗೆ ಅಥವಾ ಖಾಲಿ ಭೂಮಿಗಳಿಗೆ ಸ್ವತ್ತು ತೆರಿಗೆಯನ್ನು ವಿಧಿಸುವುದು ಮತ್ತು ಅದನ್ನು ವಸೂಲು ಮಾಡುವುದು, ಮಾಡಿದ ಯಾವುದೇ ಉಲ್ಲಂಘನೆಯನ್ನು ಸಕ್ರಮಗೊಳಿಸಲು ಯಾವುದೇ ಹಕ್ಕನ್ನಾಗಲಿ ಅಥವಾ ಅಂಥ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ ಹಕ್ಕುಸ್ವಾಮ್ಯ, ಒಡೆತನ ಅಥವಾ ಕಾನೂನಿನ ಸ್ಥಾನಮಾನವನ್ನಾಗಲಿ ದೊರಕಿಸಿ ಕೊಡುವುದಿಲ್ಲ. ಅಂಥ ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಕಾನೂನಿನ ಉಲ್ಲಂಘನೆಗಾಗಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ವಯ ಯಾವುದೇ ಕಾನೂನು ಕ್ರಮಕ್ಕೆ ಗುರಿಯಾಗಲು ಯಾವಾಗಲೂ ಬದ್ಧವಾಗಿರತಕ್ಕದ್ದು.

(ii) ಪೌರ ಆಯುಕ್ತ ಅಥವಾ ಮುಖ್ಯಾಧಿಕಾರಿಯು (i) ಖಂಡದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ದಾಖಲೆಯನ್ನು ನಿರ್ವಹಿಸತಕ್ಕದ್ದು, ಅದು ಈ ಪ್ರಕರಣದಡಿ ತೆರಿಗೆಗೆ ಒಳಪಡಿಸಿದ ಕಾನೂನುಬದ್ದ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ಹಾಗೂ ಕಾನೂನುಬದ್ದವಲ್ಲದ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ವಿವರಗಳನ್ನು ಒಳಗೊಂಡಿರತಕ್ಕದ್ದು."

(iii) 107ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

(iv) 143ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ತಪ್ಪಿತಸ್ಥನು" ಎಂಬ ಪದಕ್ಕೆ ಮೊದಲು "ವಾರೆಂಟು ನೀಡಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(v) 154ನೇ ಪ್ರಕರಣದಲ್ಲಿ,-

(ಎ) 1ನೇ ಉಪ ಪ್ರಕರಣದಲ್ಲಿ "ಬಾಡಿಗೆಯ ಎಂಬ ಪದದ ತರುವಾಯ "ಅಥವಾ ಸ್ವತ್ತು ತೆರಿಗೆಯ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) 2ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ.-

"(3) ಸ್ವತ್ತು ತೆರಿಗೆಯ ನಿರ್ಧರಣೆಯ ಮೇರೆಗೆ ಅಥವಾ ಪುರಸಭೆಗೆ ಯಾವುದೇ ಹಣಕಾಸು ಉದ್ದೇಶಗಳ ಮೇರೆಗೆ ಸ್ವತ್ತು ತೆರಿಗೆಯ ಬಾಕಿಯನ್ನು ಸಂಗ್ರಹಿಸಲು ವಿಫಲನಾದ ಪುರಸಭೆಯ ಯಾರೇ ಅಧಿಕಾರಿ ಅಥವಾ ಉದ್ಯೋಗಿಯು, ಪ್ರತಿಯೊಂದು ಪ್ರಕರಣಗಳಲ್ಲಿ ಐವತ್ತು ಸಾವಿರ ರೂಪಾಯಿಗಳವರೆಗೆ ಜುಲ್ಮಾನೆಗೆ ಒಳಗಾಗತಕ್ಕದ್ದು ಮತ್ತು ಹದಿನೈದು ದಿವಸಗಳ ಸಾದಾ ಕಾರಾವಾಸದಿಂದಲೂ ಸಹ ದಂಡಿತನಾಗಬಹುದು.

**3. 1977ರ ಕರ್ನಾಟಕ ಅಧಿನಿಯಮ 14ರ ತಿದ್ದುಪಡಿ.-** ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ರಲ್ಲಿ,-

(i) 112ಎ ಪ್ರಕರಣದ (3) ನೇ ಉಪಪ್ರಕರಣದ ಕೊನೆಯಲ್ಲಿ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಈ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪಪ್ರಕರಣದಡಿಯಲ್ಲಿ ಸಲ್ಲಿಸಲಾದ ಯಾವುದೇ ವಿವರಪಟ್ಟಿಕೆಗಾಗಿ 2023-24ರ ಆರ್ಥಿಕ ವರ್ಷದ ಪ್ರಾರಂಭದಿಂದ ಹಿಂದಿನ ಆರು ಆರ್ಥಿಕ ವರ್ಷಗಳಿಗೆ ಈ ಉಪಪ್ರಕರಣದಡಿಯಲ್ಲಿ ಮಾಡಲಾದ ನಿರ್ಧರಣೆಯನ್ನು ಒಂದು ವರ್ಷದೊಳಗಾಗಿ ನಿರ್ಣಯಿಸತಕ್ಕದ್ದು."

(ii) 112ಬಿ ಪ್ರಕರಣದಲ್ಲಿ,-

(ಎ) ಉಪಪ್ರಕರಣ (1)ರಲ್ಲಿ "ಖಾಲಿ ಭೂಮಿಗಳು" ಎಂಬ ಪದಗಳ ಬದಲಾಗಿ "ಖಾಲಿ ಕಟ್ಟಡ ನಿವೇಶನಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಉಪಪ್ರಕರಣ (1)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) (i) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕಟ್ಟಡ ನಿರ್ಮಾಣದ ಉದ್ದೇಶಗಳಿಗಾಗಿ ಇರುವ ಕಟ್ಟಡ ನಿವೇಶನಗಳಿಗೆ ಹೊಸ PID (ಸ್ವತ್ತು ಗುರುತಿನ ಸಂಖ್ಯೆ) ಅಥವಾ ಖಾತಾ ನೀಡಲು ಅಧಿಕಾರ ವ್ಯಾಪ್ತಿಯ ಯೋಜನಾ ಪ್ರಾಧಿಕಾರವು ಲೇಔಟ್ ಪ್ಲಾನಿಗಾಗಿ ಪೂರ್ವಾನುಮತಿಯನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದಡಿ ಆಯುಕ್ತ ಅಥವಾ ಆಯುಕ್ತನಿಂದ ಅಧಿಕೃತಗೊಳಿಸಲಾದ ಯಾರೇ ಅಧಿಕಾರಿಯಿಂದ ಪಡೆಯತಕ್ಕದ್ದು.

(ii) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 17ನೇ ಪ್ರಕರಣದ ಮತ್ತು 17ನೇ ಪ್ರಕರಣದ ಉಪಪ್ರಕರಣ (2-ಇ) ಉಪಬಂಧಗಳನ್ನು ಅನುಸರಿಸದೆ ಪಾಲಿಕೆಯ ಆಯುಕ್ತ ಅಥವಾ ಆಯುಕ್ತನಿಂದ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಹೊಸ ಪಿಐಡಿ ಅಥವಾ ಖಾತಾವನ್ನು ನೀಡತಕ್ಕದ್ದಲ್ಲ:

ಪರಂತು, ಪಾಲಿಕೆಯ ಆಯುಕ್ತ ಅಥವಾ ಆಯುಕ್ತನಿಂದ ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಮತ್ತು ಈ ಅಧಿನಿಯಮದ 505ನೇ ಪ್ರಕರಣದ ಸದರಿ ಉಪಬಂಧಗಳನ್ನು ಅನುಸರಿಸಲು ವಿಫಲನಾದರೆ

ಮತ್ತು ಕಾನೂನುಬಾಹಿರವಾಗಿ ರಚಿತವಾದ ಪ್ಲಾಟ್‌ಗೆ ಹೊಸ ಪಿಐಡಿ ಅಥವಾ ಖಾತಾವನ್ನು ನೀಡಿದರೆ, ಸಂಬಂಧಪಟ್ಟ ಅಧಿಕಾರಿಯು ನಿಯಮಿಸಬಹುದಾದಂಥ ದಂಡನೆ ಮತ್ತು ಶಿಕ್ಷೆಗೆ ಹೊಣೆಗಾರನಾಗತಕ್ಕದ್ದು.

(1ಬಿ) (i) ಪಾಲಿಕೆಯು, ಸರ್ಕಾರಿ ಭೂಮಿಯಲ್ಲಿ, ಯಾವುದೇ ಸ್ಥಳೀಯ ಸಂಸ್ಥೆಗೆ, ಯಾವುದೇ ಶಾಸನಬದ್ಧ ಸಂಸ್ಥೆಗೆ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ಸಂಘ ಸಂಸ್ಥೆಗೆ ಸೇರಿದ ಭೂಮಿಯಲ್ಲಿ, ಕಾನೂನು ಬಾಹಿರವಾಗಿ ನಿರ್ಮಿಸಿದ ಕಟ್ಟಡವನ್ನು ಹೊರತುಪಡಿಸಿ, ಕಟ್ಟಡ ಉಪ ವಿಧಿಗಳು ಉಪಬಂಧಗಳನ್ನು ಉಲ್ಲಂಘಿಸಿ ಕಟ್ಟಿರುವ ಅಥವಾ ಅನಧಿಕೃತ ಲೇಔಟ್‌ನಲ್ಲಿ ಅಥವಾ ರೆವಿನ್ಯೂ ಭೂಮಿಯಲ್ಲಿ ಕಟ್ಟಿರುವ ಕಟ್ಟಡವು ಸೇರಿದಂತೆ ಪ್ರತಿಯೊಂದು ಕಟ್ಟಡಕ್ಕೆ, ಖಾಲಿ ಭೂಮಿಗೆ ಅಥವಾ ಅವೆರಡನ್ನೂ ಒಳಗೊಂಡು ಅಥವಾ ಈ ಉಪಬಂಧದ ಪ್ರಾರಂಭದ ದಿನಾಂಕಕ್ಕೂ ಮೊದಲು ಸೃಜಿಸಿದ ಸ್ವತ್ತಿಗಾಗಿ ಮಾತ್ರ ಅಧಿಭೋಗ ಪ್ರಮಾಣ ಪತ್ರ ಅಥವಾ ಕಟ್ಟಡ ನಿರ್ಮಾಣ ಮುಕ್ತಾಯ ಪ್ರಮಾಣಪತ್ರವನ್ನು ನೀಡದೆಯೇ ವಾಸಕ್ಕೆ ಬಳಸುತ್ತಿರುವ ಕಟ್ಟಡಕ್ಕೆ ಮೊದಲ ವರ್ಷಕ್ಕಾಗಿ ಎರಡು ಪಟ್ಟು ಸ್ವತ್ತು ತೆರಿಗೆಯನ್ನು ವಿಧಿಸಬಹುದು ಮತ್ತು ನಂತರದ ವರ್ಷಗಳಿಗೆ ಸ್ವತ್ತು ತೆರಿಗೆಯನ್ನು ಮಾತ್ರ ವಿಧಿಸತಕ್ಕದ್ದು, ಅದನ್ನು ಒಂದು ಪ್ರತ್ಯೇಕ ರಿಜಿಸ್ಟರಿನಲ್ಲಿ ನಿರ್ವಹಿಸತಕ್ಕದ್ದು. ಕರ್ನಾಟಕ ಮುನಿಸಿಪಾಲಿಟಿಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2024ರ ಪ್ರಾರಂಭದ ದಿನಾಂಕದ ತರುವಾಯ ಆ ರಿಜಿಸ್ಟರಿನಲ್ಲಿ ಹೊಸ ಸ್ವತ್ತುಗಳನ್ನು ಸೇರಿಸತಕ್ಕದ್ದಲ್ಲ:

ಪರಂತು, ಈ ಉಪ-ಪ್ರಕರಣದ ಮೇರೆಗೆ ಅಂಥ ಕಟ್ಟಡಗಳಿಗೆ ಅಥವಾ ಖಾಲಿ ಭೂಮಿಗಳಿಗೆ ಸ್ವತ್ತು ತೆರಿಗೆಯನ್ನು ವಿಧಿಸುವುದು ಮತ್ತು ಅದನ್ನು ವಸೂಲು ಮಾಡುವುದು, ಮಾಡಿದ ಯಾವುದೇ ಉಲ್ಲಂಘನೆಯನ್ನು ಸಕ್ರಮಗೊಳಿಸಲು ಯಾವುದೇ ಹಕ್ಕನ್ನಾಗಲಿ ಅಥವಾ ಅಂಥ ಕಟ್ಟಡಕ್ಕೆ ಅಥವಾ ಖಾಲಿ ಭೂಮಿಗೆ ಹಕ್ಕುಸ್ವಾಮ್ಯ, ಒಡೆತನ ಅಥವಾ ಕಾನೂನಿನ ಸ್ಥಾನಮಾನವನ್ನಾಗಲಿ ದೊರಕಿಸಿ ಕೊಡುವುದಿಲ್ಲ. ಅಂಥ ಕಟ್ಟಡಗಳು ಅಥವಾ ಖಾಲಿ ಭೂಮಿಗಳು ಕಾನೂನಿನ ಉಲ್ಲಂಘನೆಗಾಗಿ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ವಯ ಯಾವುದೇ ಕಾನೂನು ಕ್ರಮಕ್ಕೆ ಗುರಿಯಾಗಲು ಯಾವಾಗಲೂ ಬದ್ಧವಾಗಿರತಕ್ಕದ್ದು.

(ii) ಆಯುಕ್ತನು (i)ನೇ ಖಂಡದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ದಾಖಲೆಯನ್ನು ನಿರ್ವಹಿಸತಕ್ಕದ್ದು, ಅದು ಈ ಪ್ರಕರಣದಡಿ ತೆರಿಗೆಗೆ ಒಳಪಡಿಸಿದ ಕಾನೂನುಬದ್ಧ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ಹಾಗೂ ಕಾನೂನುಬದ್ಧವಲ್ಲದ ಕಟ್ಟಡಗಳು ಅಥವಾ ಖಾಲಿ ಭೂಮಿಗಳ ವಿವರಗಳನ್ನು ಒಳಗೊಂಡಿರತಕ್ಕದ್ದು."

(iii) 112ಸಿ ಪ್ರಕರಣ ಮತ್ತು ಅದರೊಂದಿಗಿನ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**4. ತೊಂದರೆಗಳನ್ನು ನಿವಾರಿಸುವ ಅಧಿಕಾರ**.- (1) ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮ ನೀಡುವಲ್ಲಿ ಏನಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

# ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಈ ಮುಂದಿನವುಗಳಿಗಾಗಿ,-

(i) ನಗರ ಸ್ಥಳೀಯ ಪ್ರಾಧಿಕಾರಗಳ ವ್ಯಾಪ್ತಿಯಡಿಯಲ್ಲಿನ ಎಲ್ಲಾ ಆಸ್ತಿಗಳನ್ನು ಅವುಗಳ ಆರ್ಥಿಕ ಸಂಪನ್ಮೂಲಗಳ ಪರಿಜಾಲ (network) ಅಡಿಯಲ್ಲಿ ತರಲು;

(ii) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ರಲ್ಲಿ ಉಪಬಂಧಿಸಲಾದಂತೆ ಸರ್ಕಾರಿ ಭೂಮಿಯ ಹೊರತಾಗಿ ಅನಧಿಕೃತ ವಸತಿ ಪ್ರದೇಶಗಳಲ್ಲಿನ ಆವರಣಗಳು ಮತ್ತು ಕಟ್ಟಡಗಳಿಗೆ ಹಾಗೂ  ಅಧಿಕೃತ ವಸತಿ ಪ್ರದೇಶಗಳಲ್ಲಿನ ಅನಧಿಕೃತ ಕಟ್ಟಡಗಳಿಗೆ ಸ್ವತ್ತು ತೆರಿಗೆಯ ಉಪಬಂಧಗಳನ್ನು ವಿಸ್ತರಿಸಲು;

(iii) ಇ-ಆಸ್ತಿ ತಂತ್ರಾಂಶದ ಕುರಿತು ಅವಶ್ಯಕ ಉಪಬಂಧಗಳನ್ನು ಕಲ್ಪಿಸಲು; ಮತ್ತು

(iv) ಸದರಿ ಅಧಿನಿಯಮಗಳ ಉಪಬಂಧಗಳ ಅನನುಪಾಲನೆಯ (non-compliance) ಸಂದರ್ಭದಲ್ಲಿ ಅಧಿಕಾರಿಗಳಿಗೆ ದಂಡನೆಯನ್ನು ಉಪಬಂಧಿಸಲು,

- ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ 1964  (1964ರ ಕರ್ನಾಟಕ ಅಧಿನಿಯಮ 22)ನ್ನು ಮತ್ತು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ  ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಹೆಚ್ಚಿನ ಆರ್ಥಿಕ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ- 2** | (ii) ಉಪ-ಖಂಡದ (ಬಿ) ಬಾಬಿನ ಪರಂತುಕವು ಅಧಿನಿಯಮದ ಉಪಬಂಧಗಳನ್ನು ಪಾಲಿಸದಿರುವ ಅಧಿಕಾರಿಗಳಿಗೆ ಜುಲ್ಮಾನೆ ಮತ್ತು ಶಿಕ್ಷೆಯನ್ನು ವಿಧಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ- 3** | (ii) ಉಪ-ಖಂಡದ (ಬಿ) ಬಾಬಿನ ಪರಂತುಕವು ಅಧಿನಿಯಮದ ಉಪಬಂಧಗಳನ್ನು ಪಾಲಿಸದಿರುವ ಅಧಿಕಾರಿಗಳಿಗೆ ಜುಲ್ಮಾನೆ ಮತ್ತು ಶಿಕ್ಷೆಯನ್ನು ವಿಧಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಬಿ. ಎಸ್. ಸುರೇಶ**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

# ಅನುಬಂಧ

## ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964

## (ಕರ್ನಾಟಕ ಅಧಿನಿಯಮ 1964ರ ಸಂಖ್ಯೆ 22)

## ಉದ್ಧೃತ ಭಾಗ

XXX XXX XXX

**105. ಸ್ವತ್ತು ತೆರಿಗೆಯ ನಿರ್ಧರಣೆ.**- (1) ಈ ಅಧಿನಿಯಮದ ಅಡಿಯಲ್ಲಿ ಸ್ವತ್ತು ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಪ್ರತಿಯೊಬ್ಬ ಮಾಲೀಕನು ಅಥವಾ ಅಧಿಭೋಗದಾರನು, ಮುನ್ಸಿಪಲ್ ಕಮಿಷನರ್ ನಿಗೆ ಅಥವಾ ಸಂದರ್ಭಾನುಸಾರ ಮುಖ್ಯಾಧಿಕಾರಿಗೆ ಈ ಸಂಬಂಧದಲ್ಲಿ ಅವರು ಪ್ರಾಧಿಕೃತನಾದ ಅಧಿಕಾರಿಗೆ (ಇಲ್ಲಿ ಇನ್ನು ಮುಂದೆ ಪ್ರಾಧಿಕೃತ ಅಧಿಕಾರಿಯೆಂದು ಉಲ್ಲೇಖಿಸಲಾಗಿದೆ) IIIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ವಿವರ ಪಟ್ಟಿಕೆಯನ್ನು ಪ್ರತಿವರ್ಷ ಸಲ್ಲಿಸತಕ್ಕದ್ದು:

ಪರಂತು, ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಮಾಲೀಕನು ಅಥವಾ ಅಧಿಭೋಗದಾರನು ವಿವರ ಪಟ್ಟಿಕೆಯನ್ನು ಸಲ್ಲಿಸಿದರೆ ಮತ್ತು ಬಾಕಿ ಇರುವ ತೆರಿಗೆಯನ್ನು, ವರ್ಷದ ಪ್ರಾರಂಭದ ಮೊದಲನೇ ದಿನಾಂಕದಿಂದ ಒಂದು ತಿಂಗಳೊಳಗೆ ಪಾವತಿ ಮಾಡಿದರೆ, ಆತನು ಸಂದಾಯ ಮಾಡಬೇಕಾದ ತೆರಿಗೆಯ ಮೇಲೆ ಶೇಕಡಾ ಐದರಷ್ಟು ರಿಯಾಯಿತಿಯನ್ನು ಆತನಿಗೆ ನೀಡತಕ್ಕದ್ದು.

ಮತ್ತು ಪರಂತು, 2020-21ನೇ ಹಣಕಾಸು ವರ್ಷಕ್ಕೆ ತೆರಿಗೆಯನ್ನು ಪಾವತಿಸಲು ಹೊಣೆಗಾರನಾಗಿರುವ ಮಾಲೀಕ ಅಥವಾ ಅಧಿಭೋಗದಾರನು ಆತನ ವಿವರಪಟ್ಟಿಕೆ (ರಿಟರ್ನ್ಸ್) ಸಲ್ಲಿಸಿದಲ್ಲಿ ಮತ್ತು ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಬಾಕಿ ಇರುವ ತೆರಿಗೆಯನ್ನು ಕೂಡಾ ಪಾವತಿಸಿದಲ್ಲಿ ಆತನು ಪಾವತಿಸಬಹುದಾದ ತೆರಿಗೆಯ ಮೇಲೆ ಆತನಿಗೆ ಶೇಕಡ ಐದರ ರಿಯಾಯಿತಿಯನ್ನೂ ಸಹ ಅನುಮತಿಸತಕ್ಕದ್ದು.

ಅಲ್ಲದೆ ಪರಂತು, ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭಕ್ಕೆ ಮೊದಲು 2020-21ನೇ ಹಣಕಾಸು ವರ್ಷದಲ್ಲಿ ಪೂರ್ತಿಯಾಗಿ ಆಸ್ತಿ ತೆರಿಗೆಯನ್ನು ಪಾವತಿಸಿದ ಸಂದರ್ಭದಲ್ಲಿ ಹಾಗೆ ಅನುಮತಿಸಲಾದ ರಿಯಾಯಿತಿಯನ್ನು ಮುಂಬರುವ ವರ್ಷಗಳ ತೆರಿಗೆ ಪಾವತಿಯಲ್ಲಿ ಹೊಂದಿಸಿಕೊಳ್ಳತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಯಾವುದೇ ವಿವರಪಟ್ಟಿಕೆಯನ್ನು ಯಾರೇ ಮಾಲೀಕನು ಅಥವಾ ಅಧಿಭೋಗದಾರನು, ಸಲ್ಲಿಸುವ ಮೊದಲು, ಅಂಥ ವಿವರಪಟ್ಟಿಕೆಯ ಆಧಾರದ ಮೇಲೆ ಸಂದಾಯ ಮಾಡಬೇಕಾದ ಸ್ವತ್ತು ತೆರಿಗೆಯ ಪೂರ್ಣ ಮೊಬಲಗನ್ನು ಮುಂಗಡವಾಗಿ ಪಾವತಿ ಮಾಡತಕ್ಕದ್ದು ಮತ್ತು ಅಂಥ ತೆರಿಗೆಯನ್ನು ಸಂದಾಯ ಮಾಡಿದ್ದಕ್ಕೆ ತೃಪ್ತಿಕರ ರುಜುವಾತನ್ನು ವಿವರ ಪಟ್ಟಿಕೆಯ ಜೊತೆಯಲ್ಲಿ ಒದಗಿಸತಕ್ಕದ್ದು ಮತ್ತು ಈ ಆಧಿನಿಯಮದ ಉದ್ದೇಶಗಳಿಗಾಗಿ ಹಾಗೆ ಸಂದಾಯ ಮಾಡಬೇಕಾದ ತೆರಿಗೆಯನ್ನು, VII -ನೇ ಅಧ್ಯಾಯದ ಉದ್ದೇಶಕ್ಕಾಗಿ ಅಂಥ ಮಾಲೀಕನಿಂದ ಅಥವಾ ಅಧಿಭೋಗದಾರನಿಂದ ಬಾಕಿ ಇರುವ ಸ್ವತ್ತು ತೆರಿಗೆ ಎಂಬುದಾಗಿ ಭಾವಿಸತಕ್ಕದ್ದು. ಅಂತಿಮ ನಿರ್ಧರಣೆಯನ್ನು ಮಾಡಿದ ತರುವಾಯ, ಹಾಗೆ ಸಂದಾಯ ಮಾಡಲಾದ ಸ್ವತ್ತು ತೆರಿಗೆಯ ಮೊಬಲಗನ್ನು, ಅಂತಿಮವಾಗಿ ತೆರಿಗೆ ನಿರ್ಧರಣೆ ಮಾಡಿದ ಸ್ವತ್ತು ತೆರಿಗೆಯ ಸಂಬಂಧದಲ್ಲಿ ಸಂದಾಯ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಸಲ್ಲಿಸಿದ ಯಾವುದೇ ವಿವರ ಪಟ್ಟಿಕೆಯು ಸರಿಯಾಗಿದೆ ಮತ್ತು ಪೂರ್ಣವಾಗಿದೆಯೆಂದು ಮುನ್ಸಿಪಲ್ ಕಮಿಷನರ್ ನಿಗೆ ಸಂದರ್ಭಾನುಸಾರ ಮುಖ್ಯಾಧಿಕಾರಿಗೆ ಅಥವಾ ಪ್ರಾಧಿಕೃತ ಅಧಿಕಾರಿಗೆ ಮನದಟ್ಟಾದರೆ, ಅವನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸ್ವತ್ತು ತೆರಿಗೆಯ ನಿರ್ಧರಣೆ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ತೆರಿಗೆ ನಿರ್ಧರಣೆಯ ಆದೇಶದ ಪ್ರತಿಯನ್ನು ಕಳುಹಿಸತಕ್ಕದ್ದು. ಈ ಉಪಪ್ರಕರಣದ ಮೇರೆಗಿನ ತೆರಿಗೆ ನಿರ್ಧರಣೆಯನ್ನು, (1)ನೇ ಉಪಪ್ರಕರಣದ ಮೇರೆಗೆ ವಿವರ ಪಟ್ಟಿಕೆಯನ್ನು ಸಲ್ಲಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ಮಾಡಿ ಮುಗಿಸತಕ್ಕದ್ದು.

XXX XXX XXX

**106. ಸ್ವತ್ತು ತೆರಿಗೆಯ ರಿಜಿಸ್ಟರನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು.-** (1) ಮುನಿಸಿಪಲ್ ಏರಿಯಾ ಇರುವ ಕಟ್ಟಡಗಳು ಅಥವಾ ಖಾಲಿಭೂಮಿಗಳು ಅಥವಾ ಅವೆರಡರ ಸಂಬಂಧದಲ್ಲಿ

ಅಂಥ ವಿವರಗಳನ್ನೊಳಗೊಂಡ ಸ್ವತ್ತು ತೆರಿಗೆಯ ರಿಜಿಸ್ಟರನ್ನು ಸಿದ್ಧಪಡಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಪರಿಷ್ಕರಿಸತಕ್ಕದ್ದು.

**XXX XXX XXX**

**107. ಕಾನೂನುಬಾಹಿರ ಕಟ್ಟಡದ ಮೇಲೆ ದಂಡ ವಿಧಿಸುವುದು**.- (1) ಯಾರೇ ಆಗಲಿ,-

(i) ಈ ಅಧಿನಿಯಮದ ಮೇರೆಗೆ ಅನುಮತಿಯನ್ನು ಪಡೆಯದೇ ಅಥವಾ ಅಂಥ ಅನುಮತಿಗೆ ಸಂಬಂಧಿಸಿದ ಯಾವುದೇ ಷರತ್ತನ್ನು ಉಲ್ಲಂಘಿಸಿ ತನ್ನ ಭೂಮಿಯ ಮೇಲೆ; ಅಥವಾ

(ii) ಪಟ್ಟಣ ಮತ್ತು ಗ್ರಾಮಾಂತರ ಯೋಜನೆಗೆ ಸಂಬಂಧಿಸಿದ, ಸುಸಂಗತ ಕಾನೂನಿನ ಮೇರೆಗೆ ಅನುಮೋದನೆ ಪಡೆಯದೆ ರಚಿತವಾದ, ಅವನಿಗೆ ಸೇರಿದ ನಿವೇಶನದ ಮೇಲೆ; ಅಥವಾ

(iii) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಬೈಲಾದ ಯಾವುದೇ ಉಪಬಂಧವನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಅಂಥ ನಿಯಮಗಳ ಅಥವಾ ಬೈಲಾದ ಮೇರೆಗೆ, ಕಾನೂನು ಬದ್ಧವಾಗಿ ನೀಡಿದ ಯಾವುದೇ ನಿರ್ದೇಶನವನ್ನು ಅಥವಾ ಮಾಡಿದ ಯಾವುದೇ ಕೋರಿಕೆಯನ್ನು ಉಲ್ಲಂಘಿಸಿ ತನ್ನ ಭೂಮಿಯ ಮೇಲೆ

- ಯಾವುದೇ ಕಟ್ಟಡವನ್ನು ಅಥವಾ ಕಟ್ಟಡದ ಭಾಗವನ್ನು ಕಾನೂನುಬಾಹಿರವಾಗಿ ನಿರ್ಮಿಸಿದರೆ ಅಥವಾ ಪುನರ್ ನಿರ್ಮಿಸಿದರೆ, ಅದು ಅಂಥ ಕಾನೂನು ಬಾಹಿರ ನಿರ್ಮಾಣವಾಗಿ ಉಳಿದಿರುವಷ್ಟು ಅವಧಿಯವರೆಗೆ ಅಂಥ ಕಟ್ಟಡದ ಮೇಲೆ ವಿಧಿಸಬೇಕಾದ ಸ್ವತ್ತು ತೆರಿಗೆಯ ಎರಡರಷ್ಟಕ್ಕೆ ಸಮನಾದ ದಂಡವನ್ನು, ಅಂಥ ಕಾನೂನು ಬಾಹಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅವನ ವಿರುದ್ಧ ಯಾವುದೇ ವ್ಯವಹರಣೆಗಳನ್ನು ಹೂಡುವುದಕ್ಕೆ ಪ್ರತಿಕೂಲವಾಗದಂತೆ, ಅವನು ಪ್ರತಿವರ್ಷ ಪಾವತಿ ಮಾಡಲು ಬದ್ಧನಾಗಿರತಕ್ಕದ್ದು:

ಪರಂತು, ಅಂಥ ದಂಡ ವಿಧಿಸಿರುವುದನ್ನು ಮತ್ತು ಸಂಗ್ರಹಿಸಿರುವುದನ್ನು, ಅಂಥ ಕಾನೂನು ಬಾಹಿರ ನಿರ್ಮಾಣವನ್ನು ಅಥವಾ ಪುನರ್ ನಿರ್ಮಾಣವನ್ನು ಸಕ್ರಮಗೊಳಿಸುವುದೆಂದು ಅರ್ಥೈಸತಕ್ಕದ್ದಲ್ಲ.

(2) ಉಪಪ್ರಕರಣದ (1)ರ ಮೇರೆಗೆ ಸಂದಾಯ ಮಾಡಬೇಕಾದ ದಂಡವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಾಧಿಕಾರವು ನಿರ್ಧರಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಬೇಕಾದ ದಂಡವನ್ನು, ಅಧ್ಯಾಯ-VIIರ ಉದ್ದೇಶಕ್ಕಾಗಿ ಸಂದಾಯ ಮಾಡಬೇಕಾದ ತೆರಿಗೆ ಎಂದು ಭಾವಿಸತಕ್ಕದ್ದು.

(3) ಉಪ-ಪ್ರಕರಣ (2)ರ ಮೇರೆಗೆ ದಂಡ ವಿಧಿಸುವಿಕೆ ಮತ್ತು ಸಂಗ್ರಹಣೆಯಿಂದ ತೊಂದರೆಗೊಳಗಾದ ಯಾರೇ ವ್ಯಕ್ತಿಯು, ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು, ಆ ಬಗ್ಗೆ ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ನಿಯಮಿಸಲಾದ ಪ್ರಾಧಿಕಾರವು, ಅಪೀಲುದಾರನಿಗೆ ಮತ್ತು ಮುನಿಸಿಪಲ್ ಕೌನ್ಸಿಲ್‌ಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

**XXX XXX XXX**

**143. ಜಪ್ತಿ.-** 142ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ತಗಾದೆ ನೋಟೀಸನ್ನು ಯಾವ ವ್ಯಕ್ತಿಯ ಮೇಲೆ ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯು ಅಂಥ ತಗಾದೆಯ ನೋಟೀಸ್ ಜಾರಿ ಮಾಡಿದಂದಿನಿಂದ ಮೂವತ್ತು ದಿನಗಳೊಳಗಾಗಿ,-

(ಎ) ನೋಟೀಸಿನಲ್ಲಿ ತಗಾದೆ ಮಾಡಿದ ಮೊತ್ತವನ್ನು ಸಂದಾಯ ಮಾಡದಿದ್ದರೆ;

(ಬಿ) ಅದನ್ನು ಏಕೆ ಸಂದಾಯ ಮಾಡಲಾಗುವುದಿಲ್ಲವೆಂದು ಮುನ್ಸಿಪಲ್ ಕೌನ್ಸಿಲ್ ಅಥವಾ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ನಿಯಮದ ಮೂಲಕ ನೇಮಕ ಮಾಡಬಹುದಾದಂಥ ಅಧಿಕಾರಿ ಅಥವಾ ಮುನ್ಸಿಪಾಲಿಟಿ ಕಮಿಷನರ್ ಅಥವಾ ಚೀಫ್ ಆಫೀಸರ್ ಯಾರಾದರೂ ಇದ್ದರೆ, ಅವರಿಗೆ, ಮನದಟ್ಟಾಗುವಂತೆ ಕಾರಣವನ್ನು ತೋರಿಸದಿದ್ದರೆ; ಅಥವಾ

(ಸಿ) ತಗಾದೆ ವಿರುದ್ಧ 150ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ಅಪೀಲನ್ನು ಸಲ್ಲಿಸದಿದ್ದರೆ

- ಅವನು ಸಂದಾಯ ಮಾಡಲು ತಪ್ಪಿರುವನೆಂದು ಭಾವಿಸತಕ್ಕದ್ದು ಮತ್ತು ಆ ತರುವಾಯ ಮುನ್ಸಿಪಾಲಿಟಿ ಕಮಿಷನರ್ ಅಥವಾ ಚೀಫ್ ಆಫೀಸರ್ ನು ನಿರ್ಧರಿಸಬಹುದಾದಂತೆ ತೆರಿಗೆ ಮೊಬಲಗಿನ ಶೇಕಡಾ ಇಪ್ಪತ್ತರಷ್ಟು ಮೀರದಂಥ ಮೊತ್ತವನ್ನು ತೆರಿಗೆಯ ಬಾಕಿಯೆಂಬಂತೆ ತೆರಿಗೆಯ ಮೊಬಲಗಿನ ಜೊತೆಗೆ

ಅವನಿಂದ ದಂಡದ ರೂಪವಾಗಿ ವಸೂಲಿ ಮಾಡಬಹುದು ಮತ್ತು ತೆರಿಗೆ ಹಾಗೂ ವಸೂಲಿಯ ಎಲ್ಲ ಖರ್ಚುಗಳೊಂದಿಗೆ ದಂಡವನ್ನು XIನೇ ಅನುಸೂಚಿಯಲ್ಲಿ ವಿವರಿಸಿದ ಅಥವಾ ಅಂಥದೇ ಪರಿಣಾಮದ ನಮೂನೆಯಲ್ಲಿ ಮುನ್ಸಿಪಲ್ ಕೌನ್ಸಿಲ್ ಹೊರಡಿಸುವಂತೆ ಮಾಡುವ ವಾರಂಟಿನ ಮೂಲಕ ತಪ್ಪಿತಸ್ಥನ ಚರಸ್ವತ್ತಿನ ಜಪ್ತಿ ಮಾರಾಟದ ಅಥವಾ ಸ್ಥಿರಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ವಸೂಲ್ಮಾಡಬಹುದು:

ಪರಂತು, ಸರ್ಕಾರವು ಕ್ಲೇಮು ಮಾಡಿದ ಯಾವುದೇ ಮೊತ್ತದ ವಸೂಲಿಗಾಗಿ ಯಾವುದೇ ಅಂಥ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಮುನ್ನೆಚ್ಚರಿಕೆ ಅಥವಾ ಅನ್ಯಥಾ ಕ್ರಮಗಳನ್ನು ತೆಗೆದುಕೊಂಡಿರುವಲ್ಲಿ, ಅಂಥ ಸ್ವತ್ತಿಗೆ ಸಂಬಂಧಸಿದಂತೆ ಈ ಅಧ್ಯಾಯದ ಮೇರೆಗಿನ ಯಾವುವೇ ವ್ಯವಹರಣೆಗಳು ಕೊನೆಗೊಳ್ಳತಕ್ಕದ್ದು.

**XXX XXX XXX**

**154. ಭೂಮಿಗೆ ಕೊಡಬೇಕಾದ ಬಾಡಿಗೆಯ ವಸೂಲಿ**.- (1) ಬಾಡಿಗೆ ಬಾಬ್ತು ಯಾರೇ ವ್ಯಕ್ತಿಯಿಂದ ಯಾವುದೇ ಮೊತ್ತವು, ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾದ ಅಥವಾ ಅದರ ವ್ಯವಸ್ಥಾಪನೆಗಾಗಿ ಮುನ್ಸಿಪಲ್ ಕೌನ್ಸಿಲ್‌ಗೆ ವಹಿಸಿದ ಭೂಮಿಗೆ ಸಂಬಂಧಿಸಿದಂತೆ ಯಾವುದೇ ಮೊತ್ತವು ಬಾಕಿಯಿದ್ದರೆ ಅಂಥ ಬಾಡಿಗೆಯ ಯಾವುದೇ ಬಾಕಿಯನ್ನು ಅದು ಭೂಕಂದಾಯದ ಬಾಕಿಯಾಗಿದ್ದರೆ ಹೇಗೆ ವಸೂಲು ಮಾಡಬಹುದೋ ಹಾಗೆ ವಸೂಲು ಮಾಡಲು ಮುನ್ಸಿಪಲ್ ಕೌನ್ಸಿಲ್, ಡೆಪ್ಯುಟಿ ಕಮಿಷನರ್ ನಿಗೆ ಅರ್ಜಿ ಸಲ್ಲಿಸಬಹುದು.

(2) ಡೆಪ್ಯುಟಿ ಕಮಿಷನರ್ ನು, ಮೊತ್ತವು ಬಾಕಿಯಿದೆಯೆಂದು ಮನದಟ್ಟು ಮಾಡಿಕೊಂಡ ಮೇಲೆ ಅದನ್ನು ಭೂಕಂದಾಯದ ಬಾಕಿಯೆಂಬಂತೆ ವಸೂಲು ಮಾಡಲು ಮುಂದುವರೆಯತಕ್ಕದ್ದು.

**XXX XXX XXX**

## ಅನುಬಂಧ

## ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976

## ಕರ್ನಾಟಕ ಅಧಿನಿಯಮ 1977ರ ಸಂಖ್ಯೆ 14

## ಉದ್ಧೃತ ಭಾಗ

**XXX XXX XXX**

**112ಎ. ಸ್ವತ್ತು ತೆರಿಗೆಯ ನಿರ್ಧರಣೆ.- XXX XXX XXX**

(3) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಯಾವುದೇ ವಿವರಪಟ್ಟಿಕೆಯು ಸರಿಯಾಗಿದೆ ಮತ್ತು ಪೂರ್ಣವಾಗಿದೆಯೆಂದು ಆಯುಕ್ತರಿಗೆ ಅಥವಾ ಅಧಿಕೃತ ಅಧಿಕಾರಿಗೆ ಮನದಟ್ಟಾದರೆ, ಅವನು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸ್ವತ್ತು ತೆರಿಗೆಯ ನಿರ್ಧರಣೆ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ಮಾಲೀಕನಿಗೆ ಅಥವಾ ಅಧಿಭೋಗದಾರನಿಗೆ ತೆರಿಗೆ ನಿರ್ಧರಣೆಯ ಆದೇಶದ ಪ್ರತಿಯನ್ನು ಕಳುಹಿಸತಕ್ಕದ್ದು. ಈ ಉಪಪ್ರಕರಣದ ಮೇರೆಗಿನ ತೆರಿಗೆ ನಿರ್ಧರಣೆಯನ್ನು, (1) ನೇ ಉಪ ಪ್ರಕರಣದ ಮೇರೆಗೆ ವಿವರಪಟ್ಟಿಕೆಯನ್ನು ಸಲ್ಲಿಸಿದ ದಿನಾಂಕದಿಂದ ಒಂದು ವರ್ಷದೊಳಗೆ ಮಾಡಿ ಮುಗಿಸತಕ್ಕದ್ದು.

**XXX XXX XXX**

**112ಬಿ. ಸ್ವತ್ತು ತೆರಿಗೆಯ ರಿಜಿಸ್ಟರನ್ನು ಸಿದ್ಧಪಡಿಸುವುದು ಮತ್ತು ಪ್ರಕಟಿಸುವುದು.-** (1) ನಗರದಲ್ಲಿನ ಕಟ್ಟಡಗಳ ಅಥವಾ ಭೂಮಿಗಳ ಅಥವಾ ಅವೆರಡರ ಸಂಬಂಧದಲ್ಲಿನ ಸ್ವತ್ತು ತೆರಿಗೆಯ ರಿಜಿಸ್ಟರನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು

**XXX XXX XXX**

**112ಸಿ. ಕಾನೂನು ಬಾಹಿರ ಕಟ್ಟಡದ ಮೇಲೆ ದಂಡವಿಧಿಸುವುದು.-** (1) ಯಾರೇ ಆಗಲಿ,-

(i) ಈ ಅಧಿನಿಯಮದ ಮೇರೆಗೆ ಅನುಮತಿಯನ್ನು ಪಡೆಯದೇ ಅಥವಾ ಅಂಥ ಅನುಮತಿಗೆ ಸಂಬಂಧಿಸಿದ ಯಾವುದೇ ಷರತ್ತನ್ನು ಉಲ್ಲಂಘಿಸಿ ತನ್ನ ಭೂಮಿಯ ಮೇಲೆ; ಅಥವಾ

(ii) ಪಟ್ಟಣ ಮತ್ತು ಗ್ರಾಮಾಂತರ ಯೋಜನೆಗೆ ಸಂಬಂಧಿಸಿದ, ಸುಸಂಗತ ಕಾನೂನಿನ ಮೇರೆಗೆ ಅನುಮೋದನೆ ಪಡೆಯದೆ ರಚಿತವಾದ, ಅವನಿಗೆ ಸೇರಿದ ನಿವೇಶನದ ಮೇಲೆ, ಅಥವಾ

(iii) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಯಾವುದೇ ಉಪಬಂಧವನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಅಂಥ ನಿಯಮಗಳ ಅಥವಾ ಉಪವಿಧಿಯ ಮೇರೆಗೆ, ಕಾನೂನುಬದ್ಧವಾಗಿ ನೀಡಿದ ಯಾವುದೇ ನಿರ್ದೇಶನವನ್ನುಅಥವಾ ಮಾಡಿದ ಯಾವುದೇ ಕೋರಿಕೆಯನ್ನು ಉಲ್ಲಂಘಿಸಿ ತನ್ನ ಭೂಮಿಯ ಮೇಲೆ

- ಯಾವುದೇ ಕಟ್ಟಡವನ್ನು ಅಥವಾ ಕಟ್ಟಡದ ಭಾಗವನ್ನು ಕಾನೂನು ಬಾಹಿರವಾಗಿ ನಿರ್ಮಿಸಿದರೆ ಅಥವಾ ಪುನರ್ ನಿರ್ಮಿಸಿದರೆ, ಅದು ಅಂಥ ಕಾನೂನು ಬಾಹಿರ ನಿರ್ಮಾಣವಾಗಿ ಉಳಿದಿರುವಷ್ಟು ಅವಧಿಯವರೆಗೆ ಅಂಥ ಕಟ್ಟಡದ ಮೇಲೆ ವಿಧಿಸಬೇಕಾದ ಸ್ವತ್ತು ತೆರಿಗೆಯ ಎರಡರಷ್ಟಕ್ಕೆ ಸಮನಾದ ದಂಡವನ್ನು, ಅಂಥ ಕಾನೂನು ಬಾಹಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅವನ ವಿರುದ್ಧ ಯಾವುದೇ ವ್ಯವಹರಣೆಗಳನ್ನು ಹೂಡುವುದಕ್ಕೆ ಪ್ರತಿಕೂಲವಾಗದಂತೆ, ಅವನು ಪ್ರತಿ ವರ್ಷ ಪಾವತಿ ಮಾಡಲು ಬದ್ಧನಾಗಿರತಕ್ಕದ್ದು:

ಪರಂತು, ಅಂಥ ದಂಡ ವಿಧಿಸಿರುವುದನ್ನು ಮತ್ತು ಸಂಗ್ರಹಿಸಿರುವುದನ್ನು, ಅಂಥ ಕಾನೂನು ಬಾಹಿರ ನಿರ್ಮಾಣವನ್ನು ಅಥವಾ ಪುನರ್ನಿರ್ಮಾಣವನ್ನು ಸಕ್ರಮಗೊಳಿಸುವುದೆಂದು ಅರ್ಥೈಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಪಾವತಿ ಮಾಡಬೇಕಾದ ದಂಡವನ್ನು ನಿಯಮಿಸಬಹುದಾದ ಅಂಥ ಪ್ರಾಧಿಕಾರಿಯು ಮತ್ತು ಅಂಥ ರೀತಿಯಲ್ಲಿ ನಿರ್ಧರಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು ಮತ್ತು ಹಾಗೆ ಪಾವತಿ ಮಾಡಬೇಕಾದ ದಂಡವನ್ನು, ಬಾಕಿ ಇರುವ ಸ್ವತ್ತು ತೆರಿಗೆ ಎಂದು ಭಾವಿಸತಕ್ಕದ್ದು.

(3) 61ಎ, 62 ಅಥವಾ 444ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, (2)ನೇ ಉಪಪ್ರಕರಣದ ಮೇರೆಗೆ ದಂಡವಿಧಿಸುವಿಕೆಯ ನಿರ್ಧಾರದಿಂದ ತೊಂದರೆಗೊಳಗಾದ ಯಾರೇ ವ್ಯಕ್ತಿಯು, ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು, ಆ ಬಗ್ಗೆ ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ನಿಯಮಿಸಲಾದ ಪ್ರಾಧಿಕಾರವು, ಅಪೀಲುದಾರನಿಗೆ ಮತ್ತು ನಗರ ಪಾಲಿಕೆಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ 275, ಪ್ರತಿಗಳು 300, 24ನೇ ಜುಲೈ 2024

**KARNATAKA LEGISLATIVE COUNCIL**
**ONE HUNDRED AND FIFTY THIRD SESSION**

# THE KARNATAKA MUNICIPALITIES AND CERTAIN OTHER LAW (AMENDMENT) BILL, 2024

**(LA Bill No. 31 of 2024)**

**(As passed by the Karnataka Legislative Assembly)**

A Bill further to amend the Karnataka Municipalities Act, 1964 and the Karnataka Municipal Corporations Act, 1976.

Whereas it is expedient further to amend the Karnataka Municipalities Act, 1964 (Karnataka Act 22 of 1964) and the Karnataka Municipal Corporations Act, 1976 (Karnataka Act 14 of 1977) for the purposes hereinafter appearing;

Be it enacted by the Karnataka State Legislature in the seventy fifth year of the Republic of India as follows:-

**1. Short title and commencement.-** (1) This Act may be called the Karnataka Municipalities and Certain other Law (Amendment) Act, 2024.

(2) It shall come into force at once.

**2. Amendment of the Karnataka Act 22 of 1964.-** In the Karnataka Municipalities Act, 1964 (Karnataka Act 22 of 1964),-

(i) In section 105, in sub-section (3), the following shall be inserted at the end, namely:-

"Notwithstanding anything contained in this sub-section the assessment made under this sub-section for any return submitted under sub-section (1) for the last six financial years, commencing from the financial year 2023-24, shall be concluded within one year".

(ii) In section 106,-

(a) in sub-section (1), for the words "vacant lands" the words "vacant building sites" shall be substituted.

(b) after sub-section (1), the following shall be inserted, namely:-

"(1A) (i) Notwithstanding anything contained in this Act, prior approval for the layout plan by the jurisdictional planning authority shall be obtained by the Commissioner or Chief Officer of the Municipality or any officer authorized by the Commissioner or Chief Officer to issue new PID or khata for the building sites meant for the purposes of construction of building.

(ii) In case, the municipal areas falling under the jurisdiction of the local planning area notified under the Karnataka Town and Country Planning Act, 1961 (Karnataka Act 11 of 1963), the sanctioned layout plan shall be obtained from the jurisdictional planning authority under section 17 of the Karnataka Town and Country Planning Act, 1961 (Karnataka Act 11 of 1963) and no new PID or khata shall be issued without complying with the provisions of section 17 and sub-section (2-E) of the section 17 of the Karnataka Town and Country Planning Act, 1961(Karnataka Act 11 of 1963).

(iii)In case the municipal area is not covered under the jurisdiction of the local planning area or the planning authority constituted under the Karnataka Town and Country Planning Act, 1961 (Karnataka Act 11 of 1963), the sanctioned layout plan shall be obtained from the Director of Town and Country Planning or officer authorized by him under sub-section (2) of section 4-K of the Karnataka Town and Country Planning Act, 1961 (Karnataka Act 11 of 1963), and no new PID or khata shall be issued by the officer concerned without complying with the provisions of the Karnataka Town and Country Planning Act, 1961 (Karnataka Act 11 of 1963);

Provided that, if any officer of the Municipality fails to comply with the said provisions of the Karnataka Town and Country Planning Act, 1961 (Karnataka Act 11 of 1963) and issues new PID or khata to an unlawfully formed plot, the concerned officer shall be liable for such penalty and punishment as may be prescribed.

(1B) (i) The Municipality may levy and collect the property tax from every building, vacant land or both, including a building constructed in violation of the provisions of building bye-laws or in an unauthorized layout or in a revenue land or from a building occupied without issuance of Occupancy or Completion certificate, only for the property created prior to the date of inception of this provision, except for the building constructed illegally in the Government land, land belonging to any local body, any statutory body or an organization owned or controlled by the Government. The property tax levied for such building or vacant site shall be double the tax payable for the first year and only the property tax shall be levied for the subsequent years, which shall be maintained in a separate register. No new property shall be entered in the register after the date of commencement of the Karnataka Municipalities and Certain other Law (Amendment) Act, 2024:

Provided that, levy and collection of property tax under this sub-section from such building or vacant land does not confer any right to regularize violation made, or title, ownership or legal status to such building or vacant land. The persons holding such building or vacant land

shall always be liable for legal action for violation of law, in accordance with the provisions of this Act or any other law for the time being in force.

(ii) The Municipal Commissioner or the Chief Officer shall maintain a record as specified in clause (i), which shall contain the details of the lawful buildings or vacant lands and unlawful buildings or vacant lands, which have been taxed under this section."

(iii) Section 107 and the entries relating thereto shall be omitted.

(iv) In section 143, in sub-section (1), after the word "defaulter" the words "within two months from the date of issuance of warrant" shall be inserted.

(v) In section 154,-

(a) in sub-section (1), after the word "rent", the words "or property tax" shall be inserted.

(b) after sub-section (2), the following shall be inserted, namely:-

"(3) Any officer or employee of the municipality who fails to collect property tax dues under assessment of property tax or any financial causes to the municipality, shall be fined upto rupees fifty thousand in each case and may also be punished with simple imprisonment for fifteen days".

**3. Amendment of the Karnataka Act 14 of 1977.-** In the Karnataka Municipal Corporation Act, 1976 (Karnataka Act 14 of 1977),-

(i) In section 112A, in sub-section (3), the following shall be inserted at the end, namely:-

"Notwithstanding anything contained in this sub-section the assessment made under this sub-section for any return submitted under sub-section (1) for the last six financial years, starting from the financial year 2023-24, shall be concluded within one year".

(ii) In section 112B,-

(a) in sub-section (1), for the words "vacant lands" the words "vacant buildings sites" shall be substituted.

(b) after sub-section (1), the following shall be inserted, namely,-

"(1A) (i) Notwithstanding anything contained in the Act, prior approval for the layout plan by the jurisdictional planning authority under section 17 of the Karnataka Town and Country Planning Act, 1961 (Karnataka Act 11 of 1963) shall be obtained by the Commissioner or any officer authorized by the Commissioner to issue new PID or khata for the building sites meant for the purposes of construction of building.

(ii) No new PID or khata shall be issued by the Commissioner or any officer authorized by the Commissioner of Corporation, without complying with the provisions under section 17 and sub-section (2-E) of section 17 of the Karnataka Town and Country Planning Act, 1961(Karnataka Act 11 of 1963):

Provided that, if the Commissioner or any officer authorized by the Commissioner of the Corporation fails to comply with the said provisions of the Karnataka Town and Country Planning Act, 1961 (Karnataka Act 11 of 1963) and section 505 of this Act, and issues new PID or khata to an unlawfully formed plot, the concerned officer shall be liable for such penalty and punishment as may be prescribed.

(1B) (i) The Corporation may levy and collect the property tax from every building, vacant land or both, including a building constructed in violation of the provisions of building bye-laws or in an unauthorized layout or in a revenue land or from a building occupied without issuance of Occupancy or Completion certificate, only for the property created prior to the date of inception of this provision, except for the building constructed illegally in the Government land, land belonging to any local body, any statutory body or an organization, owned or controlled by the Government. The property tax levied for such building or vacant site shall be double the tax payable for the first year and only the property tax shall be levied for the subsequent years, which shall be maintained in a separate register. No new property shall be entered in the register after the date of commencement of the Karnataka Municipalities and Certain other Law (Amendment) Act, 2024:

Provided that, levy and collection of property tax under this sub-section from such building or vacant land does not confer any right to regularize violation made, or title, ownership or legal status to such building or vacant land. The persons holding such building or vacant land shall always be liable for legal action for violation of law, in accordance with the provisions of this Act or any other law for the time being in force.

(ii) The Commissioner shall maintain a record as specified in this section, which shall contain the details of the lawful buildings or vacant lands and unlawful buildings or vacant lands, which have been taxed under this section.”

(iii) Section 112C and the entries relating thereto shall be omitted.

**4. Power to remove difficulties.-** (1) If any difficulty arises in giving effect to the provisions of this Act the Government may by order, published in the official Gazette, as the occasion may require, do anything which appears to it to be necessary to remove the difficulty.

(2) Every order made under this section shall, as soon as may be after it is so made, be laid before the House of State Legislature.

## STATEMENT OF OBJECTS AND REASONS

**(As appended to at the time of Introduction)**

It is considered necessary to amend the Karnataka Municipalities Act, 1964 (Karnataka Act 22 of 1964) and the Karnataka Municipal Corporations Act, 1976 (Karnataka Act 14 of 1977) to,-

(i) bring in all assets under the purview of the urban local authorities under their network of financial resources;

(ii) extend the provisions of property tax to the premises and buildings in un-authorised settlements, other than Government land, and to unauthorized buildings in official settlements, as provided in the Bruhat Bengaluru Mahanagara Palike Act, 2020 (Karnataka Act 53 of 2020);

(iii) provide for necessary provisions regarding e-Asthi software; and

(iv) provide for penalty to the officers in case of non-compliance of the provisions of the said Acts.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| Clause -2 | Proviso to item (b) of sub-clause (ii) empowers the State Government to make rules regarding penalty and punishment to the officers for non-compliance of the provisions of the Act. |
| Clause-3 | Proviso to item (b) of sub-clause (ii) empowers the State Government to make rules regarding penalty and punishment to the officers for non-compliance of the provisions of the Act. |

The proposed delegation of legislative power is normal in character.

**B. S. SURESHA**
Minister for Urban Development and
Urban Planning

**K.R. MAHALAKSHMI**
Secretary
Karnataka Legislative Council

**ANNEXURE**

**THE EXTRACT FROM THE KARNATAKA MUNICIPALITIES ACT, 1964 (KARNATAKA ACT 22 OF 1964)**

**X X** **XX** **XX**

**105. Assessment of property tax.-** (1) Every owner or occupier who is liable to pay property tax under this Act shall submit every year to the Municipal Commissioner or the Chief Officer, as the case may be or the officer authorised by the Municipal Commissioner or the Chief Officer in this behalf (hereinafter referred to as authorised officer), a return in such form, within such period and in such manner as may be prescribed:

Provided that, if the owner or occupier who is liable to pay tax files his returns and also pays the property tax which is due within one month from the date of commencement of the financial year he shall be allowed a rebate of five percent on the tax payable by him.

Provided further that, for the financial year 2020-2021 if the owner or occupier who is liable to pay tax files his returns and also pay tax which is due within one month from the date of commencement of the Karnataka Municipalities and Certain Other Law (Amendment) Act, 2021 he shall also be allowed a rebate of five percent on the tax payable by him.

Provided also that, in case property tax is paid in full in the financial year 2020-21 before the commencement of the Karnataka Municipalities and Certain Other Law (Amendment) Act, 2021, the rebate so allowed shall be adjusted in payment of tax for the future years.

(2) Before any owner or occupier submits any return under sub-section (1) he shall pay in advance full amount of the property tax payable by him on the basis of such return and shall furnish along with the return satisfactory proof of payment of such tax and the tax so payable shall for the purposes of this Act be deemed to be the property tax due from such owner or occupier for the purpose of Chapter VII. After the final assessment is made the amount of property tax so paid shall be deemed to have been paid towards the property tax finally assessed.

(3) If the Municipal Commissioner or the Chief Officer, as the case may be or the authorised officer is satisfied that any return submitted under sub-section (1) is correct and complete, he shall assess the property tax in accordance with the provisions of this Act and the rules made thereunder and shall send a copy of the

order of assessment to the owner or occupier concerned. Assessment under this sub-section shall be concluded within one year from the date of submission of return under sub-section (1).

**X X XX XX**

**106. Preparation and publication of property tax register.-** (1) A Property tax register in respect of buildings or vacant lands or both in the municipal area containing such particulars shall be prepared and revised in such manner as may be prescribed.

**X X XX XX**

**107. Levy of penalty on unlawful building.-** (1) Whoever unlawfully constructs or reconstructs any building or part of a building,-

(i) on his land without obtaining permission under this Act or in contravention of any condition attached to such permission; or

(ii) on a site belonging to him which is formed without approval under the relevant law relating town and country planning; or

(iii) on his land in breach of any provision of this Act or any rule or bye-law made thereunder or any direction or requisition lawfully given or made under this Act or such rules or bye-law;

shall be liable to pay every year a penalty, which shall be equal to twice the property tax leviable on such building so long as it remains as unlawful construction without prejudice to any proceedings which may be instituted against him in respect of such unlawful construction:

Provided that such levy and collection of penalty shall not be construed as regularisation of such unlawful construction or reconstruction.

(2) Penalty payable under sub-section (1) shall be determined and collected by such authority and in such manner as may be prescribed. The penalty so payable shall be deemed to be the tax due for the purpose of chapter VII.

(3) Any person aggrieved by the determination and collection of penalty under subsection (2) may within thirty days from the date of receipt of the order appeal to the prescribed authority whose decision thereon shall be final.

(4) The prescribed authority may after giving a reasonable opportunity of being heard to the Appellant and Municipal Council pass such order as it deems fit.

**X X XX XX**

**143. Distress.—** (1) If the person on whom a notice of demand has been served under sub-section (3) of section 142, does not within thirty days from the service of such notice of demand, either,—

(a) pay the sum demanded in the notice, or

(b) show cause to the satisfaction of the municipal council, or of such officer as the municipal council by rule may appoint in this behalf, or of the Municipal Commissioner or Chief Officer, if any, why he should not pay the same, or

(c) prefer an appeal in accordance with the provisions of section 150 against the demand,

he shall be deemed to be in default, and thereupon such sum not exceeding twenty per cent of the amount of the tax as may be determined by the Municipal Commissioner or the Chief Officer, may be recovered from him by way of penalty, in addition to the amount of tax as an arrear of tax; and the tax and penalty with all costs of the recovery may be levied under a warrant caused to be issued by the municipal council in the form set forth in Schedule XI or to the like effect, by distress and sale of the movable property or attachment and sale of the immovable property of the defaulter:

Provided that where any measures precautionary or otherwise have been taken in respect of any such property for the recovery of any sum claimed by the Government, any proceedings under this Chapter in respect of such property shall abate.

**X X** **XX** **XX**

**154. Recovery of rent on land.—** (1) Where any sum is due on account of rent from a person to the municipal council in respect of land vested in, or entrusted to the management of, the municipal council, the municipal council may apply to the Deputy Commissioner to recover any arrear of such rent as if it were an arrear of land revenue.

(2) The Deputy Commissioner on being satisfied that the sum is due shall proceed to recover it as an arrear of land revenue

**X X** **XX** **XX**

## ANNEXURE

## THE EXTRACT FROM THE KARNATAKA MUNICIPAL CORPORATIONS ACT, 1976 (KARNATAKA ACT 14 OF 1977)

**X X XX XX**

**112A. Assessment of property tax.- X X XX XX**

(3) If the Commissioner or the authorised officer is satisfied that any return submitted under sub-section (1) is correct and complete, he shall asses the property tax in accordance with the provisions of this Act and the rules made thereunder and shall send a copy of the order of assessment to the owner or occupier concerned. Assessment under this subsection shall be concluded within one year from the date of submission of return under subsection (1)

**X X XX XX**

**112B. Preparation and publication of property tax register.-** (1) A property tax register in respect of buildings or lands or both in the city shall be maintained in such form and in such manner as may be prescribed.

**X X XX XX**

**112C. Levy of penalty on unlawful building.-** (1) Whoever unlawfully constructs or reconstructs any building or part of a building,-

(i) on his land without obtaining permission under this Act or in contravention of any condition attached to such permission; or

(ii) on a site belonging to him which is formed without approval under the relevant law relating town and country planning ;or

(iii) on his land in breach of any provision of this Act or any rule or bye-law made thereunder or any direction or requisition lawfully given or made under this Act or such rules or byelaw;

shall be liable to pay every year a penalty, which shall be equal to twice the property tax leviable on such building, so long as it remains as unlawful construction without prejudice to any proceedings which may be instituted against him in respect of such unlawful construction:

Provided that such levy and collection of penalty shall not be construed as regularisation of such unlawful construction or reconstruction.

(2) Penalty payable under sub-section (1) shall be determined and collected by such authority and in such manner as may be prescribed. The penalty so payable shall deemed to be the property tax due.

(3) Notwithstanding anything contained in sections 61A, 62 or 444 any person aggrieved by the determination of penalty under sub-section (2) may within thirty days from the date of receipt of the order appeal to the prescribed authority whose decision thereon shall be final.

(4) The prescribed authority may after giving a reasonable opportunity of being heard to the Appellant and the corporation pass such order as it deems fit.

Govt. Press, Vikasa Soudha, Bengaluru, 24th July, 2024, P7, W.D.275, Copies 300